ಎಂದು ನಾವೇ ಕೇಳಿಕೊಂಡು ಈಗ ಯಾರನ್ನೂ ಜವಾಬ್ದಾರಿಯನ್ನಾಗಿ ಮಾಡುವುದಕ್ಕೆ ಈ ಶಾಸನಭೆಯಲ್ಲಿ ಆಗುವುದಿಲ್ಲ. ಇದರಲ್ಲಿ ಯಾರಿಗೂ ಕಾವೇರಿ ನೀರಿನ ಕಡಿಮೆ ಕಾಳಜಿ ಬಗ್ಗೆ ಇಲ್ಲ. ಯಾರನ್ನು ಯಾರೂ ಅನುಮಾನ ಪಡುವಂತಿಲ್ಲ, ಎಲ್ಲರೂ ರಾಜ್ಯದ ಹಿತಾಸಕ್ತಿಯನ್ನು ರಕ್ಷಣೆ ಮಾಡಿ ನೆಲ ಜಲ ಉಳಿಸಿಕೊಳ್ಳುವುದಕ್ಕೆ ಇಲ್ಲಿ ಬಂದಿರುವುದು. ಆವೇಶಗಳಿಗಿಂತ ಏನಾದರೂ ವೈಜ್ಞಾನಿಕವಾಗಿ ನಾವು ಸ್ವಲ್ಪ ತರ್ಕಬದ್ಧವಾಗಿ ಒಪ್ಪಿಸಬೇಕಾಗಿರುವುದು ಸರಿ ಎನಿಸುತ್ತದೆ. ಈ ಹಂತದಲ್ಲಿ ಇಂತಹ ನಿರ್ಣಯಗಳು ಬೇಡವೆಂದು ನಾನು ಮಾನ್ಯ ಧ್ರುವನಾರಾಯಣರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಎಲ್ಲರೂ ಕಮಿಟ್ ಆಗಿದ್ದಾರೆ, ಏಕೆಂದರೆ ನಿಮ್ಮ ಪಾರ್ಟಿಯವರು ಕಮಿಟ್ ಆಗಿದ್ದಾರೆ, ನಾವು ಕಮಿಟ್ ಆಗಿದ್ದೇವೆ, ಸರ್ಕಾರ ಈ ವ್ಯವಹಾರದಲ್ಲಿ ರಾಜಕಾರಣ ಮಾಡಿದೆ ಎಂದು ನಮಗೆ ಅನಿಸುವುದಿಲ್ಲ. ಹಾಗಾಗಿ ನಾವು ರಾಜಕಾರಣ ಮಾಡುವುದು ಸರಿ ಎಂದು ಅನಿಸುವುದಿಲ್ಲ. ದಯಮಾಡಿ ಅದನ್ನು ಈ ಹಂತಕ್ಕೆ ಬಿಟ್ಟು ತಾವು ರೆಗ್ಯೂಲರ್ ಆಗಿ ನಿಯಮದ ಪ್ರಕಾರ ಸಭೆಗೆ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ.

2. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮೂಲಕ ನೀಡಲಾದ ಉತ್ತರಗಳು.

ಸಕ್ಕರೆ ಸೆಸ್ ವತಿಯಿಂದ ರಸ್ತೆಗಳ ಅಭಿವೃದ್ಧಿ

121 (1141) – ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) – ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರಕ್ಕೆ ಸಕ್ಕರೆ ಸೆಸ್‌ನಿಂದ ರಸ್ತೆಗಳ ಅಭಿವೃದ್ಧಿಗೆ ಹಣ ಬಿಡುಗಡೆಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು);

ಇ) ಕಳೆದ 3 ವರ್ಷಗಳಿಂದ ಶೇಕಡವಾರು ಹಣವನ್ನು ಬಿಡುಗಡೆ ಮಾಡದಿರಲು ಕಾರಣಗಳೇನು; (ವಿವರ ನೀಡುವುದು);

ಈ) ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಸ್.ಎ. ರವೀಂದ್ರನಾಥ (ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು) :

ಅ) ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸುವ ಪ್ರತಿ ಟನ್ ಕಬ್ಬಿಗೆ ರೂ.10 ರಂತೆ ರಸ್ತೆ ಕರವನ್ನು ಸಂಗ್ರಹಿಸಲಾಗುತ್ತಿದ್ದು, ಈ ಹಣವನ್ನು ಕಾರ್ಖಾನೆಗಳ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ಮಾತ್ರ ಬಳಸಬೇಕಾಗಿದೆ, ಆದ್ದರಿಂದ ಕೊಳ್ಳೇಗಾಲ ಕ್ಷೇತ್ರಕ್ಕೆ ಸಕ್ಕರೆ ಸೆಸ್‌ನಿಂದ ರಸ್ತೆಗಳ ಅಭಿವೃದ್ಧಿಗೆ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

ಆ) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆ ಇದೆ. ಈ ಕಾರ್ಖಾನೆಯು 2001–02 ರಿಂದ 2005–06ನೇ ಸಾಲಿನವರೆಗೆ ಹಲವಾರು ಕಾರಣಗಳಿಂದಾಗಿ ಕಬ್ಬು ಅರೆದಿರುವುದಿಲ್ಲ. ಕಬ್ಬು ಅರೆಯದೆ ಇರುವುದರ ಕಾರಣ ಕಬ್ಬು ಖರೀದಿ ತೆರಿಗೆಯಡಿ ಸಂಗ್ರಹಿಸಲಾಗುವ ರಸ್ತೆ ಸೆಸ್ ಸಂಗ್ರಹಿಸಲಾಗಿಲ್ಲ. ಈ ಕಾರಣದಿಂದಾಗಿ ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ಹಣ ಬಿಡುಗಡೆಯಾಗಿಲ್ಲ.

ಇ) ಪ್ರಶ್ನೆ (ಅ) ನಲ್ಲಿ ನೀಡಿರುವ ಉತ್ತರವೇ ಅನ್ವಯಿಸುತ್ತದೆ.

ಈ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಬಾಲರಾಜ್: ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ದುರಂತವೇನೆಂದರೆ, ಯಾವುದೇ ಒಂದು ಪ್ರಶ್ನೆಯನ್ನು ಕೇಳಿದ ತಕ್ಷಣ ಅಧಿಕಾರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಈ ಪ್ರಶ್ನೆ ಅನ್ವಯಿಸುವುದಿಲ್ಲ, ಅದು ಉದ್ಭವಿಸುವುದಿಲ್ಲ, ಅದು ಯಾವುದು ಗೊತ್ತಿಲ್ಲವೆಂದು ಉತ್ತರ ಕೊಡುತ್ತಾರೆ. ತಮ್ಮಲ್ಲಿ ನಾನು ಒಂದು ವಿಷಯವನ್ನು ಸ್ಪಷ್ಟಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಇಡೀ ರಾಜ್ಯದಲ್ಲಿರತಕ್ಕಂಥ ಸಕ್ಕರೆ ಕಾರ್ಖಾನೆಗಳ ಮುಖಾಂತರ ಪ್ರತಿ ಟನ್ ಕಬ್ಬಿಗೆ ರಸ್ತೆ ಅಭಿವೃದ್ಧಿಪಡಿಸುವುದಕ್ಕೆಂದು 10 ರೂ.ಗಳ ಕರವನ್ನು ವಸೂಲಿ ಮಾಡುತ್ತಿದ್ದಾರೆ. ಈ 10 ರೀತಿ ವಸೂಲಿ ಮಾಡಿದಂಥ ಹಣದಲ್ಲಿ ನಿರ್ದಿಷ್ಟವಾದ ಯಾವುದೇ ಕಾರ್ಯಕ್ರಮಗಳನ್ನು ನಿರೂಪಿಸಿಲ್ಲ. ಏಕೆ ರೂಪಿಸಿಲ್ಲವೆನ್ನುವುದಕ್ಕೆ ನಾನು ಇದರಲ್ಲಿ ಅವರನ್ನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನಮ್ಮ ಸಕ್ಕರೆ ಕಾರ್ಖಾನೆ ರೋಗಗ್ರಸ್ತವಾಗಿ ಸಮಸ್ಯೆಯ ಸುಳಿಗೆ ಸಿಕ್ಕಿದಾಗ ನಮ್ಮ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಗೆ ಬರತಕ್ಕಂಥ ಸಂಪೂರ್ಣವಾದ ವಿಸ್ತೀರ್ಣವನ್ನು ಬಣ್ಣಾರಿಯಮ್ಮ ಸಕ್ಕರೆ ಕಾರ್ಖಾನೆಯವರು agreement

ಮಾಡಿಕೊಳ್ಳುವುದರ ಮುಖಾಂತರ ಕಬ್ಬನ್ನು ಸರಬರಾಜು ಮಾಡುತ್ತಿದ್ದಾರೆ. Agreement ಮಾಡಿರತಕ್ಕಂಥ ಕಬ್ಬು ಮತ್ತು non–agreement ಮಾಡಿಕೊಂಡಿರತಕ್ಕಂಥ ಕಬ್ಬು ಎರಡರಲ್ಲಿ ಹೋಗತಕ್ಕಂಥ ಕಬ್ಬು ಸುಮಾರು ಪ್ರತಿ ತಿಂಗಳಿಗೆ ಅವರ capacity ಪ್ರಕಾರ ಅವರು ಹೇಳಿರುವಂತೆ 2500 ಟನ್ ಆಗುತ್ತದೆ. ನಮ್ಮ ವ್ಯಾಪ್ತಿಯಲ್ಲಿ ಹೋಗತಕ್ಕಂಥ 2500 ಟನ್ ಬಗ್ಗೆ ತಾವು ಒಂದು ವಿಷಯವನ್ನು ಅರಿತುಕೊಳ್ಳಬೇಕು. 10 ರೂ.ನಂತೆ ಒಂದು ತಿಂಗಳಿಗೆ 7.50 ಲಕ್ಷ ರೂ.ಗಳು ಹಣ ಬರುತ್ತದೆ. ಸುಮಾರು 10 ತಿಂಗಳು ಆ factory ನಡೆದರೆ ಸುಮಾರು 75 ಲಕ್ಷ ರೂ.ಗಳ ಹಣ ಬರುತ್ತದೆ, ಈ ಹಣ ಎಲ್ಲಿ ಹೋಗುತ್ತದೆ? ಇದಕ್ಕೆ ಅವರು ಕೊಡತಕ್ಕಂಥ ಉತ್ತರ "ಉದ್ಭವಿಸುವುದಿಲ್ಲ." ಎಂದು ಇದೆ. ಸಕ್ಕರೆ ಕಾರ್ಖಾನೆ ನಿಂತಿದೆ ಎಂದರೆ, ನಮ್ಮ ವ್ಯಾಪ್ತಿಯಲ್ಲಿ ಬರತಕ್ಕಂಥ ರಸ್ತೆ, ಕಬ್ಬು ಬೆಳೆಗಾರರಿಂದ ಈ ಕರ ವಸೂಲು ಮಾಡತಕ್ಕಂಥ ಹಣ ಎಲ್ಲಿ ಹೋಗಿದೆ? ಯಾರ ಹತ್ತಿರ ಇದೆ? ಇದಕ್ಕೆ ದಯವಿಟ್ಟು ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು.

ಶ್ರೀ ಎಸ್.ಎ. ರವೀಂದ್ರನಾಥ್: ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲ ತಾಲ್ಲೂಕಿನ ಮಹದೇಶ್ವರ ಸಕ್ಕರೆ ಕಾರ್ಖಾನೆ 2006 ರವರೆಗೆ ನಿಂತಿದ್ದು, ಈ ವರ್ಷ ಅದು ಪ್ರಾರಂಭವಾಗಿದೆ. ಬರುವ ಸ್ವಲ್ಪ ಸ್ವಲ್ಪ ಸೆಸ್‌ನಿಂದ ಆ ಭಾಗದಲ್ಲಿ ಬರತಕ್ಕಂಥ ರಸ್ತೆಗಳನ್ನು ಮಾಡುವುದಕ್ಕೆ ಹಣವನ್ನು ಕೊಡಿಸುತ್ತೇವೆ. ಇದರ ಜೊತೆಗೆ ಡಿಸಿ ಯವರ ಅಧ್ಯಕ್ಷತೆಯಲ್ಲಿ MLA –MLC ಯವರ ಒಂದು ಸಭೆಯನ್ನು ಕರೆಯುತ್ತೇನೆ. ಅದರಲ್ಲಿ ನಾನು ಜಿಲ್ಲಾ ಅಧಿಕಾರಿಗಳಿಗೆ ಬರುವ ಸೆಸ್‌ನ್ನು ಕೊಡಲಿಕ್ಕೆ ಸೂಕ್ತ ನಿರ್ದೇಶನವನ್ನು ಕೊಡುತ್ತೇನೆ.

ಶ್ರೀ ಎಸ್.ಬಾಲರಾಜ್: ಮಾನ್ಯ ಅಧ್ಯಕ್ಷರೆ, agreement ಮಾಡಿ supply ಮಾಡಿರತಕ್ಕಂಥ ಕಬ್ಬಿಗೆ ಹಣವನ್ನು ವಸೂಲಿ ಮಾಡಿದ್ದೀರಲ್ಲಾ ಅದನ್ನು ಈಗ ಎಲ್ಲಿ ಕೊಟ್ಟಿದ್ದೀರಿ? ಆ ಹಣ ಎಲ್ಲಿ ಹೋಗಿದೆ? ಅದನ್ನು ಯಾರಿಗೆ ಕೊಟ್ಟಿದ್ದೀರಿ? ಅಧಿಕಾರಿಗಳು ಕೊಡುವ ಉತ್ತರವನ್ನು ಕೇಳುವುದಕ್ಕೆ ನಾವು ಇಲ್ಲ. ದಯವಿಟ್ಟು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಹೇಳುತ್ತೇನೆ. ಇದರಲ್ಲಿ ಬಹಳ ಮೋಸ ನಡೆಯುತ್ತಿದೆ. ನಾನು ಹತ್ತತ್ತು ಭಾರಿ ಮೈಸೂರು ಜಿಲ್ಲಾಧಿಕಾರಿಗಳ ಹತ್ತಿರ ಹೋಗಿದ್ದೇನೆ. ಸಕ್ಕರೆ ಇಲಾಖೆಯ Commissioner ಹತ್ತಿರ ಹೋಗಿದ್ದೇನೆ, ನಾನು ಹತ್ತತ್ತು ಸಲ ಪತ್ರಗಳನ್ನು

ಕೊಟ್ಟಿದ್ದೇನೆ. ಪತ್ರ ಕೊಟ್ಟು ಕೇಳಿರುವ ಸಂದರ್ಭದಲ್ಲಿ ಕೊಡುತ್ತೇವೆಂದು ಹೇಳುತ್ತಾರೆ, ಪತ್ರವನ್ನು ಕಳುಹಿಸುತ್ತಾರೆ, ಇದುವರೆಗೆ ಹಣ ಕೊಡುವುದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಕನಿಷ್ಠಪಕ್ಷ ಸೌಜನ್ಯಕ್ಕೆ ನಮ್ಮ ವ್ಯಾಪ್ತಿಯಲ್ಲಿರುವವರಿಗೆ ಒಂದು ಸಭೆಯನ್ನು ಮಾಡಿಲ್ಲ. ಆ ಹಣ ಎಲ್ಲಿ ಹೋಗಿದೆ, 5 ವರ್ಷದಿಂದ ಆ ಹಣವನ್ನು ಎಲ್ಲಿಗೆ ಕಳುಹಿಸಿದ್ದಾರೆ?

ಶ್ರೀ ಆರ್. ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, ಮಾನ್ಯ ಬಾಲರಾಜ್‌ರವರ ಕೊಳ್ಳೇಗಾಲ ಕ್ಷೇತ್ರದಲ್ಲಿ factory ಮುಚ್ಚಿಹೋಗಿತ್ತು ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದರು, ಆದರೆ ನಮ್ಮ ಕ್ಷೇತ್ರದಲ್ಲಿ ಬರತಕ್ಕಂಥ ಬಣ್ಣಾರಿಯಂ ಸುಗರ್ ಫ್ಯಾಕ್ಟರಿ ಸಂಪೂರ್ಣವಾಗಿ ನಡೆಯುತ್ತಿದೆ. ಆದರೆ ಕಲೆಕ್ಟ್ ಆದ ಸೆಸ್ ಹಣದಲ್ಲಿ ಒಂದು ರಸ್ತೆ ಕಾಮಗಾರಿಗೂ ಕೂಡ ಹಣವನ್ನು ಬಿಡುಗಡೆ ಮಾಡಿಲ್ಲ. ದಯಮಾಡಿ ಮಂತ್ರಿಗಳು ಅಲ್ಲಿ ಶ್ರೀ ಮಹದೇಶ್ವರ ಸುಗರ್ ಫ್ಯಾಕ್ಟರಿ ಇವತ್ತಿನಿಂದ ಪ್ರಾರಂಭವಾಗಿದೆ ಎಂದು ಹೇಳಿದರು. ನಮ್ಮ ಇನ್ನೊಂದು ಭಾಗದಲ್ಲಿ ಬಣ್ಣಾರಿಯಮ್ಮ ಸುಗರ್ ಫ್ಯಾಕ್ಟರಿ ನಡೆಯುತ್ತಿದೆ, ನಾವೆಲ್ಲ ಸೆಸ್‌ನ್ನು ಕಟ್ಟುತ್ತಿದ್ದೇವೆ. ಆ ಹಣದಿಂದ ತಾವು ರಸ್ತೆಗಳ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿಲ್ಲ, ತಕ್ಷಣ ಬಿಡುಗಡೆ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ತಮ್ಮನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ನಮ್ಮ ಬಾಗಲಕೋಟ ಜಿಲ್ಲೆಯಲ್ಲಿ ಜಮಖಂಡಿ ತಾಲ್ಲೂಕಿನ ಸುತ್ತಮುತ್ತ ನಾಲ್ಕೈದು ಕಾರ್ಖಾನೆಗಳು ಬರುತ್ತವೆ. ಸುಮಾರು 4–5 ವರ್ಷದಿಂದ ಯಾವುದೇ ಒಂದು ರಸ್ತೆಯ ಅಭಿವೃದ್ಧಿಯಾಗಿಲ್ಲ. ಸೆಸ್ ಸಂಗ್ರಹವಾಗುತ್ತಿದ್ದರೂ ಸಹಿತ LOC ಬಿಡುಗಡೆಯಾಗಬೇಕು, ಅದರಲ್ಲಿ ಕೊಡುತ್ತೇವೆಂದು ಹೇಳುತ್ತಾರೆ. ಯಾವ ಗುತ್ತಿಗೆದಾರನು ಸಹ ಸುಗರ್ ಸೆಸ್ ರಸ್ತೆಗಳನ್ನು ಗುತ್ತಿಗೆದಾರನು ಮಾಡುತ್ತಿಲ್ಲ. Contract ಹಿಡಿದು 2–3 ವರ್ಷವಾಗಿದೆ, ಇನ್ನುವರೆಗೆ ಆ ರಸ್ತೆಗಳ ಕಾಮಗಾರಿಗಳನ್ನು ಪ್ರಾರಂಭ ಮಾಡಿಲ್ಲ. ಇದಕ್ಕೆ ಮಾನ್ಯ ಸಚಿವರು ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕು. ಅವರಿಂದ ನೀವು advance ಆಗಿ ಸೆಸ್‌ನ್ನು ಕಲೆಕ್ಟ್ ಮಾಡಿ ಇಟ್ಟುಕೊಂಡು ಆ ರಸ್ತೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಆ ಹಣವನ್ನು ಕಾಲಕಾಲಕ್ಕೆ ಏಕೆ ಬಿಡುಗಡೆ ಮಾಡುವುದಿಲ್ಲ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಇದೆ. ಈಗ ಹೇಗೆ ಇವರು ಉತ್ತರವನ್ನು ಹೇಳುವುದು? ಪ್ರಶ್ನೆ ಕೇಳಿದ್ದು ಕೊಳ್ಳೇಗಾಲದ ಬಗ್ಗೆ, ಮಾನ್ಯ ಸವದಿಯವರು ಜಮಖಂಡಿಯ ಬಗ್ಗೆ ಕೇಳಿದರು. ಇದೆಲ್ಲದಕ್ಕೆ ಉತ್ತರವನ್ನು ಹೇಳುವುದಕ್ಕೆ ಸಚಿವರು ಏನು ಬ್ರಹ್ಮರೇ? ಏನು ಇದು. ಸಾರ್ವಜನಿಕ ಮಹತ್ವದ policy matters ಗಳು, general importance ಆಗಿದ್ದರೆ ಯಾರಾದರೂ ಸಪ್ಲಿಮೆಂಟ್‌ರಿ ಸಜೆಸ್ಟ್ ಮಾಡಿದರೆ with the best of his efforts ಉತ್ತರವನ್ನು ಕೊಡಬಹುದು. ಜಮಖಂಡಿ ಬಗ್ಗೆ ಅವರು ಕೇಳಿದರೆ, ನಾನೇ ಮಂತ್ರಿಯಾಗಿದ್ದರೆ ಹೇಗೆ ಉತ್ತರವನ್ನು ಕೊಡುವುದು.

ಅಧ್ಯಕ್ಷರು: ಈಗ ಏನಾಗಿದೆ ಎಂದರೆ, ಸೆಸ್‌ನ್ನು ಏನು ಕಲೆಕ್ಟ್ ಮಾಡುತ್ತಿದ್ದಾರೆ, ಅದರಿಂದ ರಸ್ತೆಗಳನ್ನು ಅಭಿವೃದ್ಧಿ ಮಾಡುವ ಬಗ್ಗೆ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅವರವರ ಏರಿಯಾದಲ್ಲಿ ಇದು ಆಗಿಲ್ಲ. ಅದರ ಬಗ್ಗೆ ಕೇಳುತ್ತಿದ್ದಾರೆ. ಬೇರೆ ಬೇರೆ ಕಾರ್ಖಾನೆಗಳು ಇರಬಹುದು ನಾನು ಒಪ್ಪುತ್ತೇನೆ. ಆದರೆ ಅದು ರಸ್ತೆಗಳ ಅಭಿವೃದ್ಧಿ ಬಗ್ಗೆ ಅಲ್ಲವೆ?

ಶ್ರೀ ಎ.ಬಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ಹಾಗೂ ಎಲ್ಲಾ ಜಿಲ್ಲೆಯಲ್ಲಿ ಕೂಡ ಅದೇ ಆಗಿದೆ. ರಾಜ್ಯಾದ್ಯಾಂತ ಶುಗರ್ ಸೆಸ್‌ನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಸರ್ಕಾರಕ್ಕೆ ಕೊಡುತ್ತಾರೆ, ಇವತ್ತು 5 ಕೋಟಿ ರೂ.ಗಳು ಇದೆ, ಅದಕ್ಕೆ ನೀತಿ ನಿರೂಪಣೆ ಬೇಕಲ್ಲವೆ? ಶುಗರ್ ಡೈರೆಕ್ಟರ್ ಬರುತ್ತಾರೆ, ಹೈಕೋರ್ಟ್ ಹೇಳಿದೆ ಎಂದು ಹೇಳುತ್ತಾರೆ. ಅಲ್ಲಿ ಏನಾಗಿದೆ ಎಂದರೆ, ವ್ಯವಸ್ಥಾಪಕ ಮಂಡಳಿಗೆ ಮತ್ತು ಈ ಸರ್ಕಾರಕ್ಕೆ ಭಿನ್ನಾಭಿಪ್ರಾಯ ಇದೆ. ಶಾಸಕರು ಹೇಳಿದ್ದು ಮಾಡಬೇಕೋ? ಫ್ಯಾಕ್ಟರಿಯವರು ಹೇಳಿದ್ದು ಮಾಡಬೇಕೆ? ಇದು ಮೂಲಭೂತ ಸಮಸ್ಯೆ ಇದನ್ನು ಸರ್ಕಾರದಿಂದ ಬಗೆಹರಿಸುವುದಕ್ಕಾಗುತ್ತಿಲ್ಲ. ಅದಕ್ಕೆ ಇವತ್ತು ಸರ್ಕಾರದವರು ಸ್ಪಷ್ಟವಾದ ಒಂದು ನಿರ್ದೇಶನವನ್ನು ಕೊಟ್ಟು ಶಾಸಕರನ್ನು ಕೇಳಿ ಮಾಡಬೇಕೆಂದು ಹೇಳಿದ್ದಾರೆ. ಅಧಿಸೂಚನೆ ಮತ್ತು ಸರ್ಕ್ಯುಲರ್ ಇವತ್ತು ಇದೆ. ಆದರೆ ಅದನ್ನು ಯಾವ ಕಾರ್ಖಾನೆಯವರೂ ಒಪ್ಪುತ್ತಿಲ್ಲ. ಇದರ ಬಗ್ಗೆ ಎಲ್ಲಾ ಕಡೆ ಜಗಳ ಇರುವುದು ಮಾನ್ಯ ಸಚಿವರಿಗೆ ಗೊತ್ತಿದೆ. ಇದಕ್ಕೆ ಏನಾದರೂ ಒಂದು ಪರಿಹಾರ ಕಂಡುಹಿಡಿದು ಸಮಸ್ಯೆಯನ್ನು ಬಗೆಹರಿಸಬೇಕಲ್ಲವೆ? ನಮ್ಮ ಜಿಲ್ಲೆಯಲ್ಲಿ ಸುಮಾರು 5–6 ಕೋಟಿ ರೂ.ಗಳು ಇದೆ. ದಯವಿಟ್ಟು ಮಾನ್ಯ ಸಚಿವರು ಆ ಹಣವನ್ನು ರಸ್ತೆಗಳ ಅಭಿವೃದ್ಧಿಗೆ ಬಿಡುಗಡೆ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರವನ್ನು ಹೇಳಿ. ಈಗಾಗಲೇ 3–4 ಜನರಿಗೆ ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟಿದ್ದೇನೆ. ಎಲ್ಲರೂ ಕೇಳುವುದಕ್ಕೆ ಅವಕಾಶವಿಲ್ಲದಿರುವುದರಿಂದ ಸಚಿವರು ಉತ್ತರವನ್ನು ಹೇಳಲಿ. ಅದು ಅಲ್ಲದೇ ಅರ್ಧಗಂಟೆ ಕಾಲಾವಕಾಶದಲ್ಲಿ ಕೂಡ ಇದಕ್ಕೆ ಅವಕಾಶವಿದೆ. ಸೆಸ್ ಕಟ್ಟುತ್ತಿದ್ದಾರಾ? ಕಟ್ಟುತ್ತಿದ್ದರೆ ಅವರು ರಸ್ತೆಗಳಿಗೆ ಹಣವನ್ನು ಏಕೆ ಬಿಡುಗಡೆ ಮಾಡುತ್ತಿಲ್ಲವೆಂದು ಹೇಳಿ, ಸ್ವಾಮಿ.

ಶ್ರೀ ಎಸ್.ಎ.ರವೀಂದ್ರನಾಥ್: ಮಾನ್ಯ ಅಧ್ಯಕ್ಷರೆ, ಈ ಹಣ ಈ ವರ್ಷ ಕಲೆಕ್ಟ್ ಆದರೆ ಮುಂದಿನ ವರ್ಷದಿಂದ ಅಂದರೆ ಎರಡು ವರ್ಷದಲ್ಲಿ ಆ ಹಣವನ್ನು ಖರ್ಚು ಮಾಡಬೇಕೆಂದು ಈ ಹಿಂದೆ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಈಗ ಕಲೆಕ್ಟ್ ಆಗಿರುವ 4 ಕೋಟಿ ಏನು ಹಣ ಇದೆ, ಆ ಹಣವನ್ನು ಈಗ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಗೆ ಕೊಡಲಾಗಿದ್ದು ಅದಕ್ಕೆ MLA ಮತ್ತು MLC ಯವರು ಇದರ ಸದಸ್ಯರು ಆಗಿರುತ್ತಾರೆ. ಅದು ಅಲ್ಲದೆ ಎಲ್ಲಾ ಸಕ್ಕರೆ ಕಂಪನಿಯವರನ್ನು ಸಮಿತಿ ಸಭೆಗೆ ಕರೆಸುವಂಥದ್ದನ್ನು ಮಾಡುತ್ತೇವೆ. ಆದಷ್ಟು ಹಣವನ್ನು ಬೇಗನೇ ಬಿಡುಗಡೆ ಮಾಡಿಸಿ ಈ ರಸ್ತೆಗಳನ್ನು ರಿಪೇರಿ ಮಾಡಿಸುವಂಥ ಕೆಲಸವನ್ನು ಮಾಡಿಸುತ್ತೇವೆ.

ಶ್ರೀ ಎಸ್. ಬಾಲರಾಜ್: ಆ ಹಣವನ್ನು ಕೊಟ್ಟುಬಿಟ್ಟಿದ್ದಾರೆಯೇ, ಮತ್ತೆ ಕೊಟ್ಟಿರತಕ್ಕಂಥ ಹಣದಲ್ಲಿ ಬಾಕಿ ಇದೆಯೇ? ಅದಕ್ಕೆ ಸಂಬಂಧಪಟ್ಟವರನ್ನು ಕರೆಸಿ ಉತ್ತರ ಕೊಡಿಸಿ, ಅಧ್ಯಕ್ಷರೆ.

ಶ್ರೀ ಎಸ್.ಎ.ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು): ಈಗ ಕೊಳ್ಳೇಗಾಲದಲ್ಲಿ ಎಷ್ಟು ಕಬ್ಬು ಮೈಸೂರು ಜಿಲ್ಲೆಗೆ ಬಂದಿದೆ ಎಂಬ ಬಗ್ಗೆ ಪರಿಶೀಲಿಸಿ ಚಾಮರಾಜನಗರಕ್ಕೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿಸುತ್ತೇನೆ.

ಅಧ್ಯಕ್ಷರು: ಈಗ ಎ.ಬಿ.ಪಾಟೀಲ್ ತಮ್ಮ ಪ್ರಶ್ನೆ ಕೇಳಿ. ಏಕೆಂದರೆ ಅವರು ಬೇರೆ ಕಡೆಗೆ ಹೋಗಬೇಕಾಗಿದೆ.

125 (727) ಶ್ರೀ ಪಾಟೀಲ್ ಎ.ಬಿ. (ಸಂಕೇಶ್ವರ್) – ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಸಂಕೇಶ್ವರ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಯಾವ ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ ; (ಗ್ರಾಮವಾರು ಮಾಹಿತಿ ನೀಡುವುದು);

ಆ) ಕುಡಿಯುವ ನೀರಿನ ಅಭಾವವಿರುವ ಗ್ರಾಮಗಳಿಗೆ ವಿವಿಧ ಯೋಜನೆಗಳಡಿಯಲ್ಲಿ ಎಷ್ಟು ಬಾರಿ ನೀರನ್ನು ಪೂರೈಸಲಾಗುತ್ತಿದೆ;